ಮಾಡಿಕೊಂಡು, ನಾಡಿನ ಸ್ತ್ರೀಯರನ್ನು ಗುಲಾಮಗಿರಿಗೆ ತಳ್ಳಿ ಹುಟ್ಟಿಸಿದ ಅಧ್ವಾನಗಳ ಕತೆಯನ್ನು ಈ ಕೃತಿ ಹೇಳುತ್ತಿದೆ. ಇಲ್ಲಿನ ಹೆಣ್ಣು ಒಂದೋ ಕಮಾಂಡರುಗಳ ಹೆಂಡಿರಾಗಿರಬೇಕು (ಅವರದ್ದು ಒಂದು ಬಗೆಯ ಬಹುಪತ್ನಿತ್ವ), ಅಥವಾ ಅಡುಗೆಯ ಕೆಲಸದವರಾಗಿರಬೇಕು ಇಲ್ಲವೇ ಕಮಾಂಡರುಗಳ ಹೆಂಡಿರಿಗೆ ಮಕ್ಕಳಾಗದಿದ್ದ ಪಕ್ಷದಲ್ಲಿ (ಹೆಚ್ಚಿನವರು ಬಂಜೆತನದ ಶಾಪಕ್ಕೆ ಗುರಿಯಾದವರು) ತಾವು ಮಕ್ಕಳನ್ನು ಹೆತ್ತು ಅವರಿಗೆ ಕೊಡುವುದಕ್ಕಷ್ಟೇ ನಿಯೋಜಿತರಾದ (ಒಂದು ವಿಧದ ಬಾಡಿಗೆ ತಾಯ್ತನದ ವೇಶ್ಯೆಯರಾಗಿ) ಹ್ಯಾಂಡ್‌ಮೇಡ್ಸ್ ಆಗಿರಬೇಕು. ದೇಶದ ಹೆಂಗಸರಿಗೆ ಬೇರೆ ಯಾವುದೇ ಅಧಿಕಾರ, ಹಕ್ಕು ಇಲ್ಲ. ಕೇವಲ ಐದು ಮಂದಿ ಹೆಂಗಸರಷ್ಟೇ ಆಂಟ್ಸ್‌ಗಳೆಂದು ಕರೆಯಲ್ಪಡುತ್ತ, ಅಧಿಕಾರ ಕೇಂದ್ರಕ್ಕೆ ನಿಷ್ಠರಾಗಿ, ಉಳಿದವರಿಗಿಂತ ಹೆಚ್ಚಿನ ಅಧಿಕಾರ ಹೊಂದಿದ್ದಾರೆ ಮತ್ತು ಅಧಿಕಾರ ಕೇಂದ್ರಕ್ಕೆ ಸ್ತ್ರೀಯರನ್ನು ನಿಯಂತ್ರಿಸಲು ಸಹಾಯಕರಾಗಿದ್ದಾರೆ ಎನ್ನಬಹುದು. ಇವರೆಲ್ಲರೂ ಸದ್ಯ ಅಮಾನತ್ತಿನಲ್ಲಿರುವ ನ್ಯಾಯಾಲಯಗಳ ನ್ಯಾಯಮೂರ್ತಿಗಳು. ದೇಶದಲ್ಲಿ ಸಂವಿಧಾನ ಅಮಾನತ್ತಿನಲ್ಲಿದೆ ಮತ್ತು ಶೀಘ್ರವೇ ಅದನ್ನು ಮರುಸ್ಥಾಪಿಸಲಾಗುತ್ತದೆ ಎನ್ನುವ ಮಾತಿನ ಭರವಸೆಯಂತೂ ಸಿಗುತ್ತಿದೆ. ಈ ಐದು ಮಂದಿ ಹೆಂಗಸರಿಗಷ್ಟೇ ಪುಸ್ತಕಗಳ ಲಭ್ಯತೆ, ಓದುವ ಮತ್ತು ಬರೆಯುವ ಅಧಿಕಾರವಿರುತ್ತದೆ, ಉಳಿದವರಿಗಿಲ್ಲ. ಅವರಲ್ಲಿಯೇ ಒಬ್ಬಳಾದ ಆಂಟ್ ಲಿಡಿಯಾ ಈ ಕಾದಂಬರಿಯ ಮೂವರು ನಿರೂಪಕಿಯರಲ್ಲಿ ಒಬ್ಬಳು. ಈಕೆ ಅಧಿಕಾರ ಕೇಂದ್ರದ ಪರವಾಗಿದ್ದಂತೆ ಕಂಡರೂ ಆಕೆಯ ನೀತಿ ನಿಲುವು ಪ್ರತಿರೋಧದ ನೆಲೆಗಳನ್ನು ಹೊಂದಿದೆ ಎನ್ನುವುದು ಗಮನಾರ್ಹ.

ಇನ್ನಿಬ್ಬರು ನಿರೂಪಕಿಯರಾದ ಡೈಸಿ ಮತ್ತು ಆಗ್ನೆಸ್ ಸೇರಿ ಈ ಕೃತಿಯನ್ನು ಕಟ್ಟಿಕೊಡುತ್ತಾರೆ. ಡೈಸಿ ಗಿಲಿಯಾಡಿನಿಂದ ಹೊರಗೆ, ಕೆನಡಾದಲ್ಲಿ ಬೆಳೆಯುತ್ತಿರುವ ಹದಿನೈದರ ಹುಡುಗಿ ಮತ್ತು ಈಕೆ ನಮಗೆ ಸ್ವಲ್ಪಮಟ್ಟಿಗೆ ಅನ್ಯ ನೋಟ ಒದಗಿಸುತ್ತಾಳೆ. ಹಿಂದಿನ ಕೃತಿಯಲ್ಲೇ ಬಂದಿದ್ದ ಪಾತ್ರಗಳಾದ ಜೂನ್ ಮತ್ತು ಆಕೆಯ ಪ್ರೇಮಿ ನಿಕ್ ಮಗಳಾದ ನಿಕೋಲೆಯನ್ನು ಗುಟ್ಟಾಗಿ ದೇಶದಿಂದ ಹೊರಕ್ಕೊಯ್ಯಲಾಗಿದ್ದು ಆಕೆಯ ಹುಡುಕಾಟ ನಡೆದಿದೆ.

ಇಡೀ ಕಾದಂಬರಿಯಲ್ಲಿ ಆಂಟ್ ಲಿಡಿಯಾ ಪಾತ್ರವನ್ನು ಹೊರತು ಪಡಿಸಿದರೆ ಉಳಿದ ನಿರೂಪಕ ಪಾತ್ರಗಳು ಅಷ್ಟೊಂದು ದಟ್ಟವಾಗಿ ಮೂಡಿಬಂದಿಲ್ಲ. ಡೈಸಿ ನಡೆಯಾಗಲಿ, ನ್ಯಾಯಮೂರ್ತಿಯಾಗಿದ್ದ ಲಿಡಿಯಾ ಒಪ್ಪಿಕೊಳ್ಳುವ ಆಂಟ್ ಪಾತ್ರವಾಗಲಿ ಅಷ್ಟೊಂದು ಸಹಜವಾದದ್ದು ಅನಿಸುವುದಿಲ್ಲ. ಅಲ್ಲದೆ ಇಡೀ ಕೃತಿ ಗಿಲಿಯಾಡಿನ ಪತನದ ಹಾದಿಯನ್ನು ನಿಖರಗೊಳಿಸುತ್ತ ಸಾಗುವುದನ್ನು ಬಿಟ್ಟರೆ ವಿಶೇಷವಾದ ಏನನ್ನೂ ಹೇಳುತ್ತಿಲ್ಲ. ಅಥವಾ ಸದ್ಯ ನಾವು ಕಾಣುತ್ತಿರುವ ವಾಸ್ತವವೇ ಗಿಲಿಯಾಡಿನ ಚಿತ್ರವನ್ನು ಮೀರಿಸುವಷ್ಟು ಸ್ತ್ರೀವಿರೋಧಿಯಾಗಿರುವುದೇ ಅದರ ವೈಶಿಷ್ಟ್ಯವನ್ನು ಕಂಡುಕೊಳ್ಳುವಲ್ಲಿ ನಮಗಿರುವ ಸಮಸ್ಯೆಯಾಗಿರಲೂ ಬಹುದು. ಇದೇ ಅಂಶ ಬಹುಶಃ ಗಿಲಿಯಾಡ್ ಈಗ ಪ್ರಸ್ತುತವೇ ಎನ್ನುವವರಿಗೆ ಉತ್ತರವೂ ಆಗಿದೆ ಎನ್ನಬೇಕು.

## ನರೇಂದ್ರ ಪೈ

ಸದಾ ಉತ್ತಮ ಸಾಹಿತ್ಯದ ಕಡೆ ತುಡಿಯುವ ನರೇಂದ್ರ ಪೈ ಮಂಗಳೂರಿನವರು. ಅಲ್ಲಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಪೈ ಮುಖ್ಯವಾಗಿ ವಿಮರ್ಶಕರು, ಕತೆಗಾರರು. ಅವರ ಕಥಾಸಂಕಲನಗಳು 'ಟಿಕ್ ಟಿಕ್ ಪೆನ್ನು', 'ಕನಸುಗಳೇ ಮರಳಿ ಬನ್ನಿ'. ಕತೆಗಾರ ಎಸ್. ದಿವಾಕರ್ ಅವರ ಸಾಹಿತ್ಯ ಪರಿಚಯಿಸುವ ವಾಚಿಕೆ 'ರೂಪರೂಪಗಳನ್ನು ದಾಟಿ' ಸಂಪಾದಿಸಿದ್ದಾರೆ.